# ಬೀದಿ ನಾಯಿಗಳ ದಾಳಿ

ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾರನ್ನೇ ಹೆದರಿಸಿದ 'ಐ.ಟಿ ರಾಜಧಾನಿ' ಬೆಂಗಳೂರಿನಲ್ಲಿ ಬೀದಿ ನಾಯಿಗಳ ಕಾಟಕ್ಕೆ ಜನ ಬೆಚ್ಚಿ ಬೀಳುತ್ತಿದ್ದಾರೆ. ನಾಯಿಗಳಿಗೇಕೆ ರಕ್ತದ ರುಚಿ ಹೆಚ್ಚುತ್ತಿದೆ?



ಬೆಂಗಳೂರಿನಲ್ಲಿ ಜುಲೈ 1ರಂದು ಎರಡೂವರೆ ವರ್ಷದ ಮಗು ಸಂದೀಪ ಬೀದಿ ನಾಯಿಗಳ ಕಡಿತದಿಂದ ಸಾವನ್ನಪ್ಪಿದ. ಹದಿನೈದೇ ದಿನಗಳಲ್ಲಿ ಮತ್ತೆ ಇಬ್ಬರು ಬಾಲಕಿಯರು ಬೀದಿನಾಯಿಗಳ ದಾಳಿಗೆ ಗಾಯಗೊಂಡಿದ್ದಾರೆ. ಬೀದಿ ನಾಯಿಗಳ ಕುರಿತಾದ ಆತಂಕ ಮತ್ತೆ ಬೆಂಗಳೂರಿಗರನ್ನು ಆವರಿಸಿಕೊಂಡಿದೆ. ಬೆಳಗಿನ ವಾಯು ವಿಹಾರಗಳಲ್ಲಾಗಲಿ, ತಡ ರಾತ್ರಿ ಮನೆ ಸೇರುವ ಸಂದರ್ಭಗಳಲ್ಲಾಗಲಿ ಬೀದಿ ನಾಯಿಗಳ ಕಾಟದ ಭೀತಿ ನಾಗರಿಕರಿಗಿದ್ದೇ ಇದೆ. ಅಷ್ಟೇಕೆ, ಸ್ವತಃ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ (ಬಿಬಿಎಂಪಿ) ಆಯುಕ್ತ ಎಚ್. ಸಿದ್ದಯ್ಯನವರೂ, ವೈಯಕ್ತಿಕವಾಗಿ ಬೀದಿ ನಾಯಿಗಳ ಕಾಟದ ಬಗೆಗೆ ತಮಗಿರುವ ಭೀತಿಯನ್ನು ಬಹಿರಂಗಪಡಿಸಿದ್ದಾರೆ. 'ಬೈಕ್‌ನಲ್ಲಿ ಸಂಚರಿಸಿರುತ್ತಿದ್ದರೆ ನನಗೆ ಸುರಕ್ಷಿತ ಭಾವ ಬರುವುದು ಸಾಧ್ಯವೇ ಇರಲಿಲ್ಲ. ಕಾರ್‌ನಲ್ಲಿ ಪಯಣಿಸುವುದರಿಂದ ಸುರಕ್ಷಿತ ಭಾವ ಇದೆ' ಎಂದು ಆಯುಕ್ತ ಸಿದ್ದಯ್ಯ ಹೇಳಿಕೊಂಡಿದ್ದಾರೆ. ಆಯುಕ್ತರೇ ಇಷ್ಟು ಭಯಭೀತರಾಗಿದ್ದರೆ ಉಳಿದ ಜನರ ಪಾಡೇನು? ಕೆಲವು ವರ್ಷಗಳ ಹಿಂದೆ ಬೆಳಗಿನ ವಾಯುವಿಹಾರಕ್ಕೆ ತೆರಳಿದ್ದ ಬೆಂಗಳೂರಿನ ಆಗಿನ ಪಾಲಿಕೆ ಆಯುಕ್ತರಿಗೂ ಬೀದಿ ನಾಯಿ ಕಚ್ಚಿತ್ತು ಎನ್ನುವುದೂ ಇಲ್ಲಿ ಸ್ಮರಣಾರ್ಹ.

ಅಂತೂ, ಬೀದಿ ನಾಯಿಗಳ ಕಾಟ ಬೆಂಗಳೂರಿನ ನೆಮ್ಮದಿ ಕೆಡಿಸಿರುವುದಂತೂ ನಿಜ. ಬೆಂಗಳೂರು ಮಾತ್ರವಲ್ಲ, ಮೈಸೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಗುಲ್ಬರ್ಗ ಹಾಗೂ ತುಮಕೂರುಗಳಲ್ಲೂ ಬೀದಿ ನಾಯಿಗಳ ಹಾವಳಿ ಮಿತಿ ಮೀರಿದೆ ಎಂಬುದು ಸರ್ಕಾರದ ಮೂಲಗಳು ನೀಡುವ ಮಾಹಿತಿ. ಬೆಂಗಳೂರು ಒಂದರಲ್ಲೇ ಬೀದಿ ನಾಯಿಗಳ ಅಂದಾಜು ಸಂಖ್ಯೆ 3.5 ಲಕ್ಷ. ಪ್ರತಿ ಐದು ವರ್ಷಕ್ಕೊಮ್ಮೆ ಇವುಗಳ ಸಂಖ್ಯೆ ದ್ವಿಗುಣಗೊಳ್ಳುತ್ತಾ ಸಾಗುತ್ತದೆ. ಹಾಗಿದ್ದಲ್ಲಿ ಇವುಗಳ ನಿಯಂತ್ರಣಕ್ಕೇನೂ ಕ್ರಮಗಳೇ ಇಲ್ಲವೆ? ಹಲವು ವರ್ಷಗಳ ಹಿಂದೆಯೇ ಎಬಿಸಿ (ಅನಿಮಲ್ ಬರ್ತ್ ಕಂಟ್ರೋಲ್– ಪ್ರಾಣಿ ಸಂತಾನಶಕ್ತಿ ನಿಯಂತ್ರಣ ಕಾರ್ಯಕ್ರಮ) ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಜಾರಿಗೊಳಿಸಲಾಗಿದೆ. ಇದಕ್ಕಾಗಿ ಈವರೆಗೆ ಸುಮಾರು 12 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ. ಹೀಗಿದ್ದೂ ಈ ಕಾರ್ಯಕ್ರಮ ಹೆಚ್ಚು ಪರಿಣಾಮಕಾರಿಯಾಗಿರುವಂತೆ ಕಂಡುಬರುತ್ತಿಲ್ಲ ಎಂಬ ಭಾವನೆ ದಟ್ಟವಾಗಿದೆ. ಹಲವು ಸರ್ಕಾರೇತರ ಸಂಸ್ಥೆಗಳು ಈ ಕಾರ್ಯಕ್ರಮದಲ್ಲಿ ತೊಡಗಿಕೊಂಡಿದ್ದು, ಈ ಕಾರ್ಯಕ್ರಮವನ್ನು ಪೂರ್ಣಗೊಳಿಸಲು 2014ರ ಗಡುವು ನಿಗದಿ ಪಡಿಸಲಾಗಿದೆ. ಈಗ ಈ ಎಬಿಸಿ ಕಾರ್ಯಕ್ರಮವನ್ನು ತ್ವರಿತವಾಗಿ ಪೂರ್ಣಗೊಳಿಸಲು ಬಿಬಿಎಂಪಿ ಮುಂದಾಗಿದ್ದು, ಇನ್ನೊಂದು ವರ್ಷದೊಳಗೇ ಪೂರ್ಣಗೊಳಿಸಲು ಆದೇಶವನ್ನೂ ನೀಡಿದೆ.

ಬೀದಿ ನಾಯಿಗಳ ನಿಯಂತ್ರಣಕ್ಕೆ ಆದರ್ಶ ಮಾರ್ಗ ಎಂದರೆ ಅವುಗಳನ್ನು ಹಿಡಿದು ಪ್ರಾಣಿ ದಯಾ ಸಂಘಗಳಿಗೆ ಒಪ್ಪಿಸುವುದು. ಮತ್ತೊಂದು ಮಾರ್ಗವೆಂದರೆ ನೋವುರಹಿತ ವಿಧಾನದಲ್ಲಿ ನಿರ್ದಾಕ್ಷಿಣ್ಯವಾಗಿ ನಾಯಿಗಳನ್ನು ಸಾಯಿಸುವುದು. ಆದರೆ ಈ ವಿಧಾನದ ಬಗ್ಗೆ ಸಾಕಷ್ಟು ಆಕ್ಷೇಪಗಳು ಇದ್ದು, ಇದರ ಪರ ಹಾಗೂ ವಿರುದ್ಧವಾಗಿ ಸಾಕಷ್ಟು ಚರ್ಚೆಗಳು ನಡೆದಿವೆ.

ಬೀದಿ ನಾಯಿಗಳ ಸಂಖ್ಯೆ ಹೆಚ್ಚಲು ನಗರಗಳ ರಸ್ತೆಗಳಲ್ಲಿ ಸರಿಯಾಗಿ ನಿರ್ವಹಿಸದ ಕಸವೂ ಕಾರಣ. ಉಳಿಕೆ ಆಹಾರ ವಸ್ತುಗಳು ನಾಯಿಗಳ ಗುಂಪುಗಳನ್ನು ಆಕರ್ಷಿಸುವುದು ಮಾಮೂಲು. ಈ ಹಿನ್ನೆಲೆಯಲ್ಲಿ ಘನ ತ್ಯಾಜ್ಯಗಳ ನಿರ್ವಹಣೆ ವ್ಯವಸ್ಥೆಯನ್ನು ಯಶಸ್ವಿಗೊಳಿಸಬೇಕಾದುದು ಅವಶ್ಯ. ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಬಹುಶಃ ಬಹು ವಿಧದಲ್ಲಿ, ಬಹು ಹಂತಗಳಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಿದೆ. ಬೀದಿ ನಾಯಿಗಳ ಸಂತಾನಶಕ್ತಿ ಹರಣ, ರೋಗ ನಿರೋಧಕ ಚುಚ್ಚುಮದ್ದು, ರೋಗಗ್ರಸ್ತ ನಾಯಿಗಳಿಗೆ ದಯಾ ಮರಣ, ಬೀದಿ ನಾಯಿಗಳಿಗೆ ಆಶ್ರಯ ಕಲ್ಪಿಸುವಂತಹ ಬೃಹತ್ ತಾಣ– ಹೀಗೆ ಹಲವು ನೆಲೆಗಳಲ್ಲಿ ಪರಿಹಾರ ಕಂಡುಕೊಳ್ಳಲು ಯತ್ನಿಸುವುದು ನ್ಯಾಯಸಮ್ಮತ.

ಪ್ರಾಣಿಗಳಿಗೆ ಅನುಕಂಪ ತೋರಬೇಕಾದುದು ಸಾಂವಿಧಾನಿಕ ಬದ್ಧತೆ. ಹೀಗಾಗಿ ಪ್ರಾಣಿಪ್ರಿಯರು ನಾಯಿಗಳನ್ನು ದತ್ತು ಪಡೆದು ಲೈಸೆನ್ಸ್ ಕೊಳ್ಳಬೇಕೆಂದು ಈ ಹಿಂದೆ ಬಿಬಿಎಂಪಿ ಮನವಿ ಮಾಡಿದ್ದೂ ಉಂಟು. ಪ್ರಾಣಿ ದಯಾ ಸಂಘಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸಲು ಶ್ರಮಿಸಬೇಕು. ನಮ್ಮ ಮನೆ ಕಾಯುತ್ತಾ ನಮ್ಮೊಳಗೆ ಸುರಕ್ಷಿತ ಭಾವ ಮೂಡಿಸುವ ನಾಯಿ, ಬೀದಿಗಳಲ್ಲಿ ನಮಗೆ ಮತ್ತು ನಮ್ಮ ಮಕ್ಕಳ ಪ್ರಾಣಗಳಿಗೆ ಕಂಟಕವಾಗುವಂತಹ ಬೆಳವಣಿಗೆಗಳ ಬಗ್ಗೆ ಸಮಾಜದ ಹೊಣೆಗಾರಿಕೆಯನ್ನು ಸಮಗ್ರವಾಗಿ ಅರ್ಥೈಸಿಕೊಳ್ಳುವುದು ಅಗತ್ಯ. ಜೊತೆಗೆ ಬಹು ನೆಲೆಗಳಲ್ಲಿ ಬೀದಿ ನಾಯಿಗಳ ಹಾವಳಿಗಳ ತಡೆಗೆ ಕಟ್ಟುನಿಟ್ಟಿನ ರಚನಾತ್ಮಕ ಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಹೊಣೆಯಿಂದ ಸರ್ಕಾರವೂ ತಪ್ಪಿಸಿಕೊಳ್ಳಬಾರದು.

■ ಸಿ.ಜಿ.ಮಂಜುಳಾ